ಅ.ದಾ.ನಂ.160/2020
ಡಿ.ಡಬ್ಲ್ಯೂ:1

**ಸಾಕ್ಷಿಯನ್ನು ಇಂದು ದಿನಾಂಕಃ 12.12.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ಶ್ರೀ. ಜಿ.ಬಿ.ಬಿ., ವಕೀಲರಿಂದ ವಾದಿ ಪರವಾಗಿ**

1. ನಮ್ಮ ಬ್ಯಾಂಕಿನಿಂದ ದಾವಾ ಆಸ್ತಿ ವಿಪಿಸಿ ನಂ.1272 ರ ಆಸ್ತಿಯನ್ನು ನಮಗೆ ಕೊಡುವಂತೆ ಮುತ್ತಗಿ ಪಂಚಾಯತಿಗೆ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಸರ್ಕಾರದವರು ಪಂಚಾಯತಿಯವರಿಗೆ ನಿರ್ದೇಶಿಸಿರುತ್ತಾರೆ ಎಂದು ಹೇಳುತ್ತಾರೆ. ನಮ್ಮ ಬ್ಯಾಂಕಿನ ಮ್ಯಾನೇಜರ್ ರವರು ದಿಃ7.3.2018 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತಿರವರಿಗೆ ಸಲ್ಲಿಸಿದ್ದರು. ಸದರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತಿರವರು ಮುತ್ತಗಿ ಪಂಚಾಯತಿರವರಿಗೆ ದಿಃ08.3.2018 ರಂದು ನಿರ್ದೇಶನ ನೀಡಿರುತ್ತಾರೆ.

2. ವಿಪಿಸಿ ನಂ.1272 ರ ಮೂಲ ನಂ.220 ಎಂದರೆ ಸರಿ. ಮೂಲ ವಿಪಿಸಿ ನಂ.220 ರ ಆಸ್ತಿಯ ಪೂರ್ವ- ಪಶ್ಚಿಮ 130 ಅಡಿ ಮತ್ತು ಉತ್ತರ-ದಕ್ಷಿಣ 110 ಅಡಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ವಿಪಿಸಿ ನಂ.220 ಆಸ್ತಿಯ ವಾಯುವ್ಯ ಮೂಲೆಯಲ್ಲಿ 49X43 ಅಡಿ ಆಸ್ತಿಯನ್ನು ಸರ್ಕಾರಿ ದವಾಖಾನೆಗಾಗಿ ವಾದಿಯರ ತಂದೆಯಾದ ನಿಂಗನಗೌಡ ಬಿರಾದಾರರವರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾದಿಯರ ತಂದೆಯು ಸರ್ಕಾರಿ ಆಸ್ಪತ್ರೆಗೆ ನೀಡಿರುವ ಹಾತ ನಕಾಶೆಯಲ್ಲಿ ತೋರಿಸಿರುವ ಸಿಡಿಯ ಕ್ಷೇತ್ರ ಹೊರತು ಪಡಿಸಿ ಉಳಿದ ಎಲ್ಲಾ ಆಸ್ತಿಯು ವಾದಿಯರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ.

3. ನಮಗೆ ಆಸ್ತಿಯನ್ನು ಕೊಟ್ಟಿದ್ದಾರೆಂದು ಹೇಳುವ ಆಸ್ತಿಯ ಚಕಬಂದಿ ನನಗೆ ಹೇಳಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಾದಿಯರು ಯಾವ ರೀತಿಯಾದ ಕಟ್ಟು ಕತೆಯನ್ನು ಕಟ್ಟಿದ್ದಾರೆ ಎಂದರೆ ಸಾಕ್ಷಿಯು ನಮಗೆ ನೀಡಿರುವ ಆಸ್ತಿಯು ಪಂಚಾಯತಿಯಲ್ಲಿ ದಾಖಲಾಗಿರುತ್ತದೆ ಎಂದು ಹೇಳುತ್ತಾರೆ. ಮುತ್ತಗಿ ಗ್ರಾಮದವರು ನಮ್ಮ ಬ್ಯಾಂಕಿಗೆ ಅರ್ಜಿಯನ್ನು ನೀಡಿ ತಮ್ಮ ಊರಿನಲ್ಲಿ ಬ್ಯಾಂಕ್‌ನ್ನು ಸ್ಥಾಪಿಸುವಂತೆ ದಿಃ18.2.1995 ರಲ್ಲಿ ಅರ್ಜಿಯನ್ನು ಕೊಟ್ಟಿರುತ್ತಾರೆ. ಸಾರ್ವಜನಿಕರು ನಮ್ಮ ಬ್ಯಾಂಕಿಗೆ ದಿಃ18.2.1995 ರಲ್ಲಿ ಕೊಟ್ಟಿರುವ ಅರ್ಜಿಯನ್ನು ನಾನು ನ್ಯಾಯಾಲಯಕ್ಕ ಹಾಜರುಪಡಿಸಿರುವುದಿಲ್ಲ.

4. 1991 ನೇ ಸಾಲಿನಲ್ಲಿ ನಮಗೆ ಕೊಟ್ಟಿದ್ದಾರೆಂದು ಹೇಳು ಆಸ್ತಿಯ ಮೂಲ ಸರ್ವೆ ನಂಬರ ನನಗೆ ಗೊತ್ತಿಲ್ಲ. ನಮ್ಮ ಹಾತ ನಕಾಶೆಯಲ್ಲಿ ಸರ್ಕಾರಿ ಆಸ್ಪತ್ರೆ ಕಟ್ಟಡ ಎಂದು ನಮೂದಿಸಿರುತ್ತೇವೆ ಎಂದರೆ ಸರಿ. ನಮ್ಮ ಹಾತ ನಕಾಶೆಯಲ್ಲಿ ತೋರಿಸಿರುವ ಗ್ರಾಮೀಣ ಬ್ಯಾಂಕಿನ ಜಾಗ ಮತ್ತು ಪಾರ್ಕಿಂಗ್ ಎಂದು ತೋರಿಸಿರುವ ಆಸ್ತಿ ವಾದಿಗಳಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮ್ಮ ಹಾತ ನಕಾಶೆಯಲ್ಲಿ ತೋರಿಸಿರುವ ಎ.ಬಿ.ಸಿ.ಡಿ ಕ್ಷೇತ್ರದಲ್ಲಿ ಇ.ಎಫ್.ಜೆ. ಎಚ್ ಕ್ಷೇತ್ರದಲ್ಲಿ ಅನಧೀಕೃತವಾಗಿ ತಗಡಿನ ಶೆಡ್ಡನ್ನು ಹಾಕಿದ್ದಾರೆಂದು ಹೇಳುವ ಶೆಡ್ಡನ್ನು ಯಾವಾಗ ಹಾಕಿದ್ದಾರೆಂದರೆ ಸಾಕ್ಷಿಯು ಈ ದಾವೆಯು ದಾಖಲಾದ ನಂತರ ವಾದಿಯರು ಹಾಕಿದ್ದಾರೆ ಎಂದು ಹೇಳುತ್ತಾರೆ.

5. ಸದರಿ ಶೆಡ್ಡನ್ನು ಹಾಕಿದ ನಂತರ ನಾನು ಪಂಚಾಯತಿಗೆ ಯಾವುದೇ ಅರ್ಜಿಯನ್ನು ಕೊಟ್ಟಿಲ್ಲ. ಸಾಕ್ಷಿಯು ಮುಂದುವರೆದು ದಾವೆಯು ನ್ಯಾಯಾಲಯದಲ್ಲಿ ಇರುವುದರಿಂದ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನಮಗೆ ವಿಪಿಸಿ ನಂ.1272 ರ ಆಸ್ತಿಯಲ್ಲಿ 60X 40 ಅಡಿ ಆಸ್ತಿಯನ್ನು ಕೊಟ್ಟಿದ್ದಾರೆಂದು ಹೇಳುವ ಆಸ್ತಿಯನ್ನು ಬಿಟ್ಟು ಎಷ್ಟು ಉಳಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ರ ಠರಾವು ಆಗುವ ಸಮಯದಲ್ಲಿ ನಮ್ಮ

ಕಛೇರಿಯಿಂದ ಯಾರು ಪಂಚಾಯತಿಯಲ್ಲಿ ಹಾಜರು ಇರಲ್ಲಿಲ್ಲ. ನಮಗೆ ಕೊಟ್ಟಿದ್ದಾರೆಂದು ಹೇಳುವ ಆಸ್ತಿಯಲ್ಲಿ 1995 ರಿಂದ ಇಲ್ಲಿಯವರೆಗೆ ಯಾವುದೇ ಕಟ್ಟಡ ಇಲ್ಲ ಎಂದರೆ ಸರಿ.

6. ಸಾಮಾನ್ಯವಾಗಿ ಕಂಪ್ಯೂಟರಾಯಿಡ್ಜ ಉತಾರೆಯನ್ನು ಮಾಡುವಾಗ ಆಸ್ತಿಯ ಮಾಲೀಕರು ಆಸ್ತಿಯಲ್ಲಿ ನಿಂತು ಛಾಯಾಚಿತ್ರ ತೆಗೆಸಿದಾಗ ಮಾತ್ರ ಉತಾರೆ ಬರುತ್ತದೆ ಎಂದರೆ ಸಾಕ್ಷಿಯು ಆ ಪದ್ದತಿ ಇರಲಿಲ್ಲ ಎಂದು ಹೇಳುತ್ತಾರೆ. ನಮಗೆ ಆಸ್ತಿಯನ್ನು ಕೊಟ್ಟಿದ್ದಾರೆಂದು ಹೇಳುವ ಆಸ್ತಿಯ ನಂಬರ 1272 ಏಕೆ ಮುಂದುವರಿಯಲಿಲ್ಲ ಏಕೆ ಬದಲಾಗಿ 1407 ಎಂದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಡಿ-1 ರ ಠರಾವು ಪಂಚಾಯತಿ ಆದ ನಂತರ ಆಗಿರುತ್ತದೆ. ನಮಗೆ ದಾವಾ ಅಸ್ತಿಯ ಕುರಿತು ಯಾವುದೇ ರೀತಿ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರೂ ಕೂಡಾ ನಾವು ಮತ್ತು ಪಂಚಾಯತಿಯವರು ವಿಲಾಫೆಯಾಗಿ ಖೊಟ್ಟಿ ದಾಖಲಾತಿಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾವು ನೀಲ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

7. ನಮ್ಮ ಹಾತ ನಕಾಶೆಯಲ್ಲಿ ಜಿ.ಎಚ್.ಐ.ಜೆ ನಮೂದು ಇಲ್ಲ ಎಂದರೆ ಸರಿ. ನಾವು ವಾದಿಯರ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**